
**ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ**

# ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ 19 ಆಗಸ್ಟ್ 2019 ಸಂಚಿಕೆ 1

## ರಾಷ್ಟ್ರೀಯತೆ – ಜೆ. ಕೃಷ್ಣಮೂರ್ತಿ



“ಸ್ವಾತಂತ್ರ್ಯದಲ್ಲಿ ಮಾತ್ರ ಸೃಜನಶೀಲತೆ ಇರಲು ಸಾಧ್ಯ.”.

– ಜೆ. ಕೃಷ್ಣಮೂರ್ತಿ

**ಪ್ರಶ್ನೆ:** ರಾಷ್ಟ್ರೀಯತೆ ಹೋದ ನಂತರ ಯಾವುದು ಬರುತ್ತದೆ?

**ಕೃಷ್ಣಮೂರ್ತಿ**: ಪ್ರಜ್ಞಾನ ಬರುತ್ತದೆ ಎಂಬುದು ಸ್ಪಷ್ಟವಾಗಿದೆ. ಈ ಪ್ರಶ್ನೆಯಲ್ಲಿ ಒಳ ಅಭಿಪ್ರಾಯ ಅದಲ್ಲವೆಂದು ನನ್ನ ಭಾವನೆ, ಇಲ್ಲಿ ಒಳ ಅಭಿಪ್ರಾಯವೇನೆಂದರೆ ರಾಷ್ಟ್ರೀಯತೆಯ ಬದಲು ಯಾವುದು ಬರಲು ಸಾಧ್ಯ? ಒಂದರ ಬದಲು ಮತ್ತೊಂದನ್ನು ತರುವುದರಿಂದ ಪ್ರಜ್ಞಾನ ಲಭಿಸುವುದಿಲ್ಲ. ನಾನು ಒಂದು ಮತವನ್ನು ಬಿಟ್ಟು ಮತ್ತೊಂದನ್ನು ಸೇರಿಕೊಂಡರೆ, ಅಥವಾ ಒಂದು ರಾಜಕೀಯ ಸಂಸ್ಥೆಯನ್ನು ತ್ಯಜಿಸಿ ಮುಂದೆ ಮತ್ತೊಂದನ್ನು ಸೇರಿಕೊಂಡರೆ, ಇಂತಹ ನಿರಂತರ ಬದಲಾವಣೆ ಒಂದು ಪ್ರಜ್ಞಾನರಹಿತ ಸ್ಥಿತಿಯನ್ನು ಸೂಚಿಸುತ್ತದೆ.

ರಾಷ್ಟ್ರೀಯತೆ ಹೇಗೆ ಹೋಗುತ್ತದೆ? ನೀವು ಅದರ ಒಳತೊಡರುಗಳನ್ನು ಸಂಪೂರ್ಣವಾಗಿ ಅರಿತುಕೊಳ್ಳುವುದರ ಮೂಲಕ, ಅದನ್ನು ಪರೀಕ್ಷಿಸುವುದರ ಮೂಲಕ, ಬಾಹ್ಯ ಮತ್ತು ಆಂತರಿಕ ಕಾರ್ಯಾಚರಣೆಯಲ್ಲಿ ಅದರ ಮಹತ್ವವನ್ನು ಅರಿತುಕೊಳ್ಳುವುದರ ಮೂಲಕ ಮಾತ್ರ ಅದು ಹೋಗಲು ಸಾಧ್ಯ. ಬಾಹ್ಯದಲ್ಲಿ ಅದು ಜನರಲ್ಲಿ ವಿಭಾಗಗಳು, ವರ್ಗಗಳು, ಯುದ್ಧಗಳು ಮತ್ತು ವಿನಾಶಗಳನ್ನು ಉಂಟುಮಾಡುತ್ತದೆ, ಜಾಗರೂಕತೆಯಿಂದ ವೀಕ್ಷಿಸುವ ಯಾರಿಗೇ ಆಗಲಿ ಈ ಸಂಗತಿ ಸ್ಪಷ್ಟವಾಗಿ ಗೋಚರವಾಗುತ್ತದೆ. ತನಗಿಂತ ದೊಡ್ಡದಾಗಿರುವುದರೊಡನೆ, ಒಂದು ರಾಷ್ಟ್ರದೊಡನೆ, ಒಂದು ವಿಚಾರದೊಡನೆ ಏಕೀಕರಣ ಮಾಡಿಕೊಳ್ಳುವುದು ಆಂತರಂಗಿಕವಾಗಿ ಮತ್ತು ಮಾನಸಿಕವಾಗಿ ‘ನಾನು’ ಎಂಬುದನ್ನು ಉಬ್ಬಿಸುವ (ಸ್ವ–ವಿಕಸನದ) ಒಂದು ವಿಧಾನ. ಒಂದು ಸಣ್ಣ ಹಳ್ಳಿಯಲ್ಲಿ ಅಥವಾ ಒಂದು ದೊಡ್ಡಪಟ್ಟಣದಲ್ಲಿ ಅಥವಾ ಎಲ್ಲಿಯೇ ಆಗಲಿ, ವಾಸಿಸುತ್ತಿರುವ ನನಗೆ ಯಾವ ಬೆಲೆಯೂ ಇಲ್ಲ; ಆದರೆ ನಾನು ನನಗಿಂತ

ಹಿರಿದಾಗಿರುವುದರೊಡನೆ, ರಾಷ್ಟ್ರದೊಡನೆ, ಏಕೀಭವಿಸಿಕೊಂಡರೆ, ನನ್ನನ್ನು ನಾನು ಒಬ್ಬ ಹಿಂದೂ ಎಂದು ಕರೆದುಕೊಂಡರೆ, ಅದು ನನ್ನ ಒಣ ಹೆಮ್ಮೆಗೆ ಪುಷ್ಟಿಕೊಡುತ್ತದೆ. ಅದು ನನಗೆ ಸುಖಾನುಭವ, ಪ್ರತಿಷ್ಠೆ ಮತ್ತು ನಾನು ಚೆನ್ನಾಗಿದ್ದೇನೆ ಎಂಬ ಭಾವನೆಗಳನ್ನು ಕೊಡುತ್ತದೆ; ತನಗಿಂತ ಹಿರಿದಾಗಿರುವುದರೊಡನೆ ಏಕೀಕರಣ ಎಂಬುದು ಯಾರು ಸ್ವ–ವಿಕಸನ ಅಥವಾ ನಾನು ಎಂಬುದರ ಉಬ್ಬುವಿಕೆ ಬಹಳ ಮುಖ್ಯವೆಂದು ಭಾವಿಸುತ್ತಾರೆಯೋ, ಅಂತಹವರಿಗೆ ಒಂದು ಮಾನಸಿಕ ಅಗತ್ಯವಾಗಿದೆ; ಇದು ಜನರ ನಡುವೆ ಘರ್ಷಣೆ ಮತ್ತು ಹೋರಾಟಗಳನ್ನು ಸಹ ಉತ್ಪತ್ತಿಮಾಡುತ್ತದೆ. ಈ ರೀತಿಯಲ್ಲಿ ರಾಷ್ಟ್ರೀಯತೆ ಬಾಹ್ಯ ಘರ್ಷಣೆಗಳನ್ನು ಮಾತ್ರವೇ ಅಲ್ಲ, ಜೊತೆಗೆ ಆಂತರಿಕ ಆಶಾಭಂಗಗಳನ್ನೂ ಉತ್ಪತ್ತಿಮಾಡುತ್ತದೆ; ಒಬ್ಬ ವ್ಯಕ್ತಿ ರಾಷ್ಟ್ರೀಯತೆಯನ್ನು ಅರ್ಥಾತ್ ರಾಷ್ಟ್ರೀಯತೆಯ ಸಮಗ್ರ ಪ್ರಕ್ರಿಯೆಯನ್ನು ಅರಿತಾಗ, ಅದು ಬಿದ್ದುಹೋಗುತ್ತದೆ. ಪ್ರಜ್ಞಾನದ ಮೂಲಕ, ಜಾಗರೂಕತೆಯಿಂದ ವೀಕ್ಷಿಸುವುದರ ಮೂಲಕ, ರಾಷ್ಟ್ರೀಯತೆಯ, ರಾಷ್ಟ್ರಪ್ರೇಮದ ಸಮಗ್ರ ಪ್ರಕ್ರಿಯೆಯನ್ನು ಒಳಹೊಕ್ಕು ಶೋಧಿಸುವುದರ ಮೂಲಕ, ರಾಷ್ಟ್ರೀಯತೆ ಎಂದರೇನು ಎಂಬ ಅರಿವು ಉಂಟಾಗುತ್ತದೆ. ಅಂತಹ ಶೋಧನೆಯ ಫಲವಾಗಿ ಪ್ರಜ್ಞಾನ ಮೂಡುತ್ತದೆ. ಆಗ ರಾಷ್ಟ್ರೀಯತೆಗೆ ಬದಲಾಗಿ ಬೇರೆ ಯಾವುದೂ ಬರಬೇಕಾಗಿಲ್ಲ. ರಾಷ್ಟ್ರೀಯತೆಗೆ ಬದಲಾಗಿ ಅದರ ಸ್ಥಾನದಲ್ಲಿ ನೀವು ಮತವನ್ನು (ಧರ್ಮ) ತಂದರೆ, ತಕ್ಷಣವೇ ಮತ (ಧರ್ಮ) ಸ್ವ–ವಿಕಸನದ ಮತ್ತೊಂದು ಸಾಧನವಾಗುತ್ತದೆ, ಮಾನಸಿಕ ಆತಂಕದ ಮತ್ತೊಂದು ಆಕರವಾಗುತ್ತದೆ; ಒಂದು ನಂಬಿಕೆಯ ಮೂಲಕ ನಾನು ಎಂಬುದನ್ನು ಪೋಷಿಸುವ ಸಾಧನವಾಗುತ್ತದೆ.

ಆದ್ದರಿಂದ ವಿಷಯ ಬದಲಾವಣೆಯ ಯಾವುದೇ ರೂಪ, ಅದು ಎಷ್ಟೇ ಘನವಾಗಿದ್ದರೂ ಅಜ್ಞಾನದ ಒಂದು ರೂಪ. ಒಬ್ಬ ಮನುಷ್ಯ ಧೂಮಪಾನಕ್ಕೆ ಬದಲಾಗಿ, ಚ್ಯೂಯಿಂಗ್ ಗಮ್ ಅಗಿಯುವುದು ಅಥವಾ ಎಲೆ ಅಡಿಕೆ ಅಗಿಯುವುದು, ಅಥವಾ ಮತ್ತೇನನ್ನಾದರೂ ಅಭ್ಯಾಸಮಾಡಿಕೊಂಡಂತೆ; ಇದಕ್ಕೆ ವ್ಯತಿರಿಕ್ತವಾಗಿ ಆ ವ್ಯಕ್ತಿ ಧೂಮಪಾನ, ಅಭ್ಯಾಸಗಳು, ಸಂವೇದನೆಗಳು, ಮಾನಸಿಕ ಕೇಳಿಕೆಗಳು ಮುಂತಾದವುಗಳ ಸಮಸ್ಯೆಯನ್ನು ಅರ್ಥಮಾಡಿಕೊಂಡರೆ, ಆಗ ಧೂಮಪಾನ ಕಳಚಿಬೀಳುತ್ತದೆ. ಪ್ರಜ್ಞಾನದ ಬೆಳವಣಿಗೆಯಾದಾಗ ಮಾತ್ರ, ಪ್ರಜ್ಞಾನ ಕೆಲಸಮಾಡುತ್ತಿರುವಾಗ ಮಾತ್ರ, ನೀವು ಅರಿತುಕೊಳ್ಳಬಲ್ಲಿರಿ. ವಿಷಯ ಬದಲಾವಣೆ ಮಾಡಿದರೆ, ಒಂದು ರೀತಿಯಲ್ಲಿ ತನಗೆ ತಾನೇ ಲಂಚಕೊಟ್ಟುಕೊಂಡಂತೆ; ಇದನ್ನು ಮಾಡದೆ ಮತ್ತೊಂದನ್ನು ಮಾಡುವಂತೆ ಅದು ನಿಮ್ಮನ್ನು ಪ್ರಲೋಭನಕ್ಕೊಳಪಡಿಸುತ್ತದೆ. ರಾಷ್ಟ್ರೀಯತೆ ವಿಷಪೂರಿತವೂ, ದುಃಖದಾಯಕವೂ ಆಗಿದ್ದು ಪ್ರಪಂಚದಲ್ಲಿ ಹೋರಾಟವನ್ನು ಉಂಟುಮಾಡುತ್ತಿದೆ; ಪ್ರಜ್ಞಾನ ಇದ್ದಾಗ ಮಾತ್ರ ಇದು ಮಾಯವಾಗಲು ಸಾಧ್ಯ. ಕೇವಲ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದರಿಂದ ಮತ್ತು ಪುಸ್ತಕಗಳನ್ನು ಅಧ್ಯಯನ ಮಾಡುವುದರಿಂದ ಪ್ರಜ್ಞಾನ ಬರುವುದಿಲ್ಲ. ಸಮಸ್ಯೆಗಳು ಏಳುತ್ತಿದ್ದಂತೆಯೇ ಅವನ್ನು ಅರಿತುಕೊಂಡಾಗ ಪ್ರಜ್ಞಾನ ಅಸ್ತಿತ್ವಕ್ಕೆ ಅರುತ್ತದೆ. ಸಮಸ್ಯೆಯನ್ನು ಅದರ ವಿವಿಧ ಮಟ್ಟಗಳಲ್ಲಿ – ಬರಿಯ ಹೊರಭಾಗದಲ್ಲಿ ಮಾತ್ರವಲ್ಲ, ಅದರ ಆಂತರಿಕ, ಮಾನಸಿಕ ತೊಡರುಗಳಲ್ಲಿ ಸಹ – ಅರಿತುಕೊಂಡಾಗ, ಆ ಪ್ರಕ್ರಿಯೆಯಲ್ಲಿ ಪ್ರಜ್ಞಾನ ಅಸ್ತಿತ್ವಕ್ಕೆ ಬರುತ್ತದೆ. ಆದ್ದರಿಂದ ಯಾವಾಗ ಪ್ರಜ್ಞಾನ ಇರುತ್ತದೆಯೋ ಆಗ ವಿಷಯಬದಲಾವಣೆ ಇರುವುದಿಲ್ಲ; ಮತ್ತು ಯಾವಾಗ ಪ್ರಜ್ಞಾನ ಇರುತ್ತದೆಯೋ ಆಗ ಮೂರ್ಖತನದ ಒಂದು ರೂಪವಾಗಿರುವ ರಾಷ್ಟ್ರೀಯತೆ – ರಾಷ್ಟ್ರಪ್ರೇಮ – ಮಾಯವಾಗುತ್ತದೆ.

**– ಮೂಲ: "ಮೊದಲ ಹಾಗೂ ಕೊನೆಯ ಬಿಡುಗಡೆ"**
**ಅನು: ರುಕ್ಮಿಣಿ ಕೃಷ್ಣಮೂರ್ತಿ**

❒

## ಅಧ್ಯಯನ ಕೇಂದ್ರದ ವರದಿ

ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ನಿಯಮಿತ ಕಾರ್ಯಕ್ರಮಗಳ ಹೊರತಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಅಧ್ಯಯನ ಕೇಂದ್ರದಲ್ಲಿ ಏರ್ಪಡಿಸಲಾಗಿತ್ತು

05/06/2019 : ಆಸ್ಟ್ರೇಲಿಯ ಮತ್ತು ಕ್ರೈಸ್ಟ್ ವಿಶ್ವವಿದ್ಯಾಲಯಗಳಿಂದ ತರಬೇತಿಯಲ್ಲಿರುವ ಶಿಕ್ಷಕರು ಜೆ.ಕೆ.ಯವರ ಸ್ವಾತಂತ್ರ್ಯ ಮತ್ತು ಇತರ ಬೋಧನೆಯ ಸಭೆಯಲ್ಲಿ ಪಾಲ್ಗೊಂಡರು.

26/06/2019 ರಿಂದ 04/07/2019 ರವರೆಗೆ, ಬೆಳಗಿನ ಸಂವಾದಗಳನ್ನು ಕೆಳಕಂಡ ವಿಷಯಗಳ ಕುರಿತಾಗಿ ಏರ್ಪಡಿಸಲಾಗಿತ್ತು.

| | |
|---|---|
| 26/06/2019 | Roots of psychological conflict |
| 27/06/2019 | Cleansing the mind of the accumulation of time |
| 29/06/2019 | Why man has given supreme importance to thought? |
| 01/07/2019 | Breaking the pattern of Ego -centered activity |
| 02/07/2019 | The ground of being and the mind of man |
| 03/07/2019 | Can insight bring about a mutation of the brain cells? |
| 04/07/2019 | Death has very little meaning |
| 05/07/2019 | ಯುವಕರು, ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಗುಂಪು ಸ್ಟಡಿ ಸೆಂಟರ್‌ನಲ್ಲಿ ಕೃಷ್ಣಮೂರ್ತಿ ಯವರ ಬೋಧನೆಗಳನ್ನು ಅನ್ವೇಷಿಸಿದರು. |
| 05/07/2019 | 'Interfaith Pilgrimage' ಅವರ ಸಲುವಾಗಿ ಇಡೀ ದಿನದ ಗುಂಪು ಚಟುವಟಿಕೆಗಳನ್ನು ಏರ್ಪಡಿಸಲಾಗಿತ್ತು. |

# ಕೃಷ್ಣಮೂರ್ತಿ ಮತ್ತು ಪ್ರೊ ಡೇವಿಡ್ ಬಾಮ್

ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ಆಲ್ಬರ್ಟ್ ಐನ್‌ಸ್ಟೀನ್‌ರವರ ವಿಧ್ಯಾರ್ಥಿ ಹಾಗೂ ಗೆಳೆಯರಾಗಿದ್ದ ಪ್ರೊ। ಡೇವಿಡ್ ಬಾಮ್, 1960ರ ದಶಕದಲ್ಲಿ ಲಂಡನ್ ವಿಶ್ವವಿದ್ಯಾಲಯದ ಬರ್ಕ್‌ಬೇಕ್ ಕಾಲೇಜ್‌ನಲ್ಲಿ 'ಥಿಯೊರೆಟಿಕಲ್ ಫಿಸಿಕ್ಸ್'ನ ಪ್ರಾಧ್ಯಾಪಕರಾಗಿದ್ದರು. ಅವರಿಗೆ ಅಕಸ್ಮಾತ್ತಾಗಿ 1959ರಲ್ಲಿ ಜೆ.ಕೆ ಯವರ "ದಿ ಫಸ್ಟ್ ಎಂಡ್ ಲಾಸ್ಟ್ ಫ್ರೀಡಮ್" (The First and Last Freedom) ಗ್ರಂಥ ಒಂದು ಗ್ರಂಥಾಲಯದಲ್ಲಿ ದೊರೆತು ಓದುವ ಅವಕಾಶವಾಯಿತು. ಅದರಿಂದ ಪ್ರಭಾವಿತರಾದ ಡಾ। ಬಾಮ್, 1961ರಲ್ಲಿ ವಿಂಬಲ್ಡನ್‌ನಲ್ಲಿ ನಡೆದ ಜೆ. ಕೆ. ಯವರ ಉಪನ್ಯಾಸಗಳನ್ನು ಕೇಳಿದರು. "ಕ್ವಾಂಟಮ್ ಸಿದ್ಧಾಂತ" (Quantum Physics)ದ ಮೇಲೆ ಅನೇಕ ಗ್ರಂಥಗಳನ್ನು ಬರೆದ ಡೇವಿಡ್ ಬಾಮ್ ಆಧುನಿಕ ಜಗತ್ತಿನ ಚಿಂತನೆಗೇ ಹೊಸ ಆಯಾಮ ಕೊಟ್ಟವರು. ಅವರು 1980ರಲ್ಲಿ ಬರೆದ ಪ್ರಸಿದ್ಧವಾದ ಪುಸ್ತಕ "ಹೋಲ್‌ನೆಸ್ ಎಂಡ್ ದಿ ಇಂಪ್ಲಿಕೇಟ್ ಆರ್ಡರ್" (Wholeness and The Implicate Order) ವಿಶದಪಡಿಸುವ ವಿಶ್ವದ ಅಂತರ್ಗತ ಅಖಂಡತ್ವದ ಕ್ರಾಂತಿಕಾರೀ ಸಿದ್ಧಾಂತವು, ಬದುಕಿನ ಅಖಂಡತೆ, ಸಮಗ್ರತೆಯ ಜೆ.ಕೆ ತತ್ವದ ಜೊತೆ ನಿಕಟ ಸಂಬಂಧ ಹೊಂದಿರುವುದನ್ನು ಗಮನಿಸಬಹುದು.

> "ಸತ್ಯ ಬಿಡುಗಡೆಗೊಳಿಸುತ್ತದೆ,
> ಸ್ವತಂತ್ರವಾಗಿರಲು ನೀವು ಮಾಡುವ ಪ್ರಯತ್ನವಲ್ಲ."
> – ಜೆ. ಕೃಷ್ಣಮೂರ್ತಿ

1959ರಿಂದ ಸುಮಾರು ಎರಡೂವರೆ ದಶಕಗಳಿಗೂ ಹೆಚ್ಚುಕಾಲ, ಬಾಮ್ ಮತ್ತು ಜೆ.ಕೆ.ಯವರ ನಡುವೆ ಬೇರೆ ಬೇರೆ ಕಾಲದಲ್ಲಿ ನೂರಾರು ಸಂವಾದಗಳು ನಡೆದವು*. ಅನೇಕ ಕ್ಷೇತ್ರಗಳನ್ನು ಒಳಗೊಂಡು ನಡೆದ ಬಹಳ ವಿಸ್ತಾರವಾದ ಈ ತಾತ್ವಿಕ ಸಂವಾದಗಳಲ್ಲಿ, ಕಾಲದ ಪ್ರಭಾವ, ಸತ್ಯ, ವಾಸ್ತವತೆ, ದುಃಖ, ಮೆದುಳು, ಪ್ರಜ್ಞೆ, ಒಳನೋಟ, ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಮಾನವ ಕುಲದ ಸರ್ವಾಂಗೀಣ ಪರಿವರ್ತನೆ ಮತ್ತು ಭವಿಷ್ಯ ಮುಂತಾದ ವಿಷಯಗಳ ಬಗ್ಗೆ ವಿಶ್ಲೇಷಣೆ ನಡೆಯುತ್ತಿತ್ತು. ಬಾಮ್, ಖಚಿತವಾದ, ನೇರವಾದ ತಾತ್ವಿಕ ಪ್ರಶ್ನೆಗಳ ಮೂಲಕ ಜೆ.ಕೆ.ಯವರ ತತ್ವವನ್ನು ಅವರ ಮಾತಿನಿಂದಲೇ ಹೊರ ಹೊಮ್ಮಿಸಲು ಸಹಕಾರಿಯಾಗುತ್ತಿದ್ದರು. ಜೆ.ಕೆ., ಈ ಸಂವಾದಗಳಿಂದ ಬಹಳಷ್ಟು ಉತ್ತೇಜಿತರಾದಂತೆ ಕಾಣುತ್ತಿದ್ದರು. ಮಾತ್ರವಲ್ಲದೆ, ಧಾರ್ಮಿಕ ಮತ್ತು ವೈಜ್ಞಾನಿಕ ಮನಸ್ಸುಗಳ ನಡುವೆ ಸೇತುವೆ ನಿರ್ಮಾಣವಾಗುವ ಕಾಲ ಸನ್ನಿಹಿತವಾಗಿದೆ ಎಂದೂ ಭಾವಿಸುತ್ತಿದ್ದರು. ಈ ಸಂವಾದಗಳಿಂದಾಗಿ ಮುಂದಿನ ತನ್ನ ಉಪನ್ಯಾಸಗಳಲ್ಲೆಲ್ಲಾ ಜೆ.ಕೆ. ಕಾಲ, ವಿಚಾರ, ಯೋಚನೆಗಳನ್ನು ಕೊನೆಗೊಳಿಸುವ ಬಗ್ಗೆ ಹೆಚ್ಚು ಹೆಚ್ಚು ಮಾತಾಡಲು ಆರಂಭಿಸಿದರು.

ಕೃಷ್ಣಮೂರ್ತಿಯವರ 'ಟೀಚಿಂಗ್ಸ್'ನ ಬಗ್ಗೆ ಡೇವಿಡ್ ಬಾಮ್ ಅದ್ಭುತ ಒಳನೋಟಗಳನ್ನು ನೀಡುತ್ತಾರೆ. ತನಗೆ ಕೃಷ್ಣಮೂರ್ತಿಯವರನ್ನು ನೋಡುವ ಅನಿವಾರ್ಯತೆ ಬಂದದ್ದನ್ನು ವಿವರಿಸುತ್ತಾ ಬಾಮ್ "1959ರಲ್ಲಿ ಕೃಷ್ಣಮೂರ್ತಿಯವರನ್ನು ಮೊದಲ ಬಾರಿ ಓದುತ್ತಿದ್ದಂತೆ, ಮುಖ್ಯವಾಗಿ ಅವಲೋಕಿಸುವವ ಮತ್ತು ಅವಲೋಕಿಸುವ ವಸ್ತುವಿನ (observer is observed) ಪ್ರಶ್ನೆಯ ಬಗ್ಗೆ ಅವರ ಆಳವಾದ ಒಳನೋಟವು ನನ್ನಲ್ಲಿ ಬಹಳಷ್ಟು ಕುತೂಹಲ ಮೂಡಿಸಿತು. ಥಿಯರೆಟಿಕಲ್ ಭೌತಶಾಸ್ತ್ರಜ್ಞನಾಗಿ, ಕ್ವಾಂಟಮ್ ಸಿದ್ಧಾಂತದ ಅರ್ಥದ ಬಗ್ಗೆ ಶ್ರದ್ಧೆಯಿಂದ ಅಧ್ಯಯನ ನಡೆಸುತ್ತಿದ್ದ ನನಗೆ ಅವರ ಪ್ರಶ್ನೆಗಳು ನನ್ನ ಕೇಂದ್ರವಸ್ತುವಿಗೆ ಬಹಳಷ್ಟು ಹತ್ತಿರವಾಗಿರುವುದು ಕಂಡುಬಂತು. ಭೌತಶಾಸ್ತ್ರದ ಬೆಳವಣಿಗೆಯ ಚರಿತ್ರೆಯಲ್ಲಿ ಮೊದಲಬಾರಿಗೆ, ಭೌತವಸ್ತುವಿನ ಮೂಲಭೂತ ನಿಯಮಗಳನ್ನು ತಿಳಿದುಕೊಳ್ಳಲು ಅವಲೋಕಿಸುವವ ಮತ್ತು ಅವಲೋಕಿಸುವ ವಿಷಯವನ್ನು ಪ್ರತ್ಯೇಕಿಸಲು ಸಾಧ್ಯ ಎಂಬ ಗ್ರಹಿಕೆ ಅನಿವಾರ್ಯ ಎಂಬ ಅಭಿಪ್ರಾಯ ಮಂಡನೆಯಾಗಿತ್ತು. ಹಾಗಾಗಿ ಈ ಪ್ರಮುಖ ಕಾರಣಕ್ಕಾಗಿ, ಮತ್ತು ಆ ಪುಸ್ತಕದಲ್ಲಿ ಪ್ರಸ್ತುತಪಡಿಸಿದ ಅವರ ಇತರ ಅನೇಕ ಒಳನೋಟಗಳಿಂದ ಬೆರಗಾಗಿ ನಾನು ಜೆ.ಕೆ.ಯವರನ್ನು ವೈಯಕ್ತಿಕವಾಗಿ ಆದಷ್ಟು ಶೀಘ್ರ ಭೇಟಿಮಾಡಿ ನೇರ ಮಾತಾಡಿಸುವ ಅಗತ್ಯವನ್ನು ಮನಗಂಡೆ" ಎನ್ನುತ್ತಾರೆ. ಮೊದಲ ಭೇಟಿಯನ್ನು ನೆನಪಿಸಿಕೊಳ್ಳುತ್ತಾ ಬಾಮ್, "ಲಂಡನ್ನಲ್ಲಿ ನಾನು ಮೊದಲ ಬಾರಿ ಭೇಟಿಯಾದ ಕ್ಷಣವೇ ಬಹಳ ಸುಲಭವಾಗಿ ನಮ್ಮಿಬ್ಬರ ನಡುವೆ ಏರ್ಪಟ್ಟ ಸಹಜ ಸಂಬಂಧ, ಸಂಭವಿಸಿದ ಸಲೀಸಾದ ಸಂವಹನವನ್ನು ಕಂಡು ನಾನೇ ನಿಬ್ಬೆರಗಾದೆ. ಜೆ.ಕೆ. ಅತ್ಯಂತ ಎಚ್ಚರದಿಂದ ತೀವ್ರವಾಗಿ ನನ್ನ ಮಾತುಗಳನ್ನು ಕೇಳಿಸಿಕೊಳ್ಳುತ್ತಾ, ತನ್ನನ್ನು ತಾನು ರಕ್ಷಿಸಿಕೊಳ್ಳುವ ಯಾವುದೇ ಮುಚ್ಚುಮರೆ–ಯಾಟವಾಡದೆ ಮುಕ್ತವಾಗಿ ನನಗೆ ಪ್ರತಿಸ್ಪಂದಿಸಿದರು. ವಿಜ್ಞಾನಿಗಳ ಮನಸ್ಸನ್ನು ಸಂಪರ್ಕಿಸುವಾಗಲೆಲ್ಲ ಇದೆ ರೀತಿಯ ತತ್ಪರತೆಯಿಂದ ಸ್ಪಂದಿಸುವ ಪರಿಪಾಟವಾಗಿತ್ತು. ಮುಖ್ಯವಾಗಿ ಐನ್‌ಸ್ಟೀನ್‌ರವರ ಜೊತೆ ಯಾವುದೇ ರಕ್ಷಣಾತ್ಮಕ ಮುಚ್ಚು ಮರೆಯಿಲ್ಲದೆ ಈ ರೀತಿ ನನ್ನ ಒಳಸತ್ವದಿಂದ, ಮುಕ್ತವಾಗಿ ಚರ್ಚೆ–ಸಂವಾದಗಳು ನಡೆಯುತ್ತಿದ್ದವು. ಜೆ.ಕೆ.ಯ ಮೊದಲ ಭೇಟಿಯಿಂದ ಆಕರ್ಷಿತನಾದ ನಾನು ಮುಂದೆ ಅವರು ಲಂಡನ್‌ಗೆ ಬಂದಾಗಲೆಲ್ಲಾ ಅವರನ್ನು ಭೇಟಿ ಮಾಡುತ್ತಿದ್ದೆ.

"...ನಮ್ಮ ಚರ್ಚೆಯು ನನ್ನ ವೈಜ್ಞಾನಿಕ ಸಂಶೋಧನಾ ಕ್ಷೇತ್ರದ ಅನೇಕ ಪ್ರಶ್ನೆಗಳ ಬಗ್ಗೆ ವಿಸ್ತಾರವಾಗಿ, ಗಂಭೀರವಾಗಿ ಸಾಗುತ್ತಿತ್ತು. ಕಾಲ ಮತ್ತು ದೇಶ, ಬಾಹ್ಯ ಪ್ರಕೃತಿ ಮತ್ತು ಅಂತಃಪ್ರಜ್ಞೆಯ ವಿಶ್ವವ್ಯಾಪೀ ಸ್ವಭಾವಗಳನ್ನು ಆಳವಾಗಿ ಪರಿಶೋಧಿಸುತ್ತಿದ್ದೆವು. ಮಾನವ ಕುಲದ ಪ್ರಜ್ಞೆಯಲ್ಲಿ ಸಾಮಾನ್ಯವಾಗಿ ಕಾಣುವ ಅಶಿಸ್ತು, ಗೊಂದಲಗಳ ಬಗ್ಗೆ ಚಿಂತಿಸುತ್ತಿದ್ದೆವು. ಈ ಚರ್ಚೆಗಳಲ್ಲಿ ಕೃಷ್ಣಜಿಯ ಒಳನೋಟಗಳು ವಿಶಾಲವಾಗಿ ಬಿಚ್ಚಿಕೊಳ್ಳುವುದನ್ನು ನಾನು ಕಂಡೆ. ಪ್ರಾಯಃ ಇದು ಕೃಷ್ಣಮೂರ್ತಿಯವರ ಗಾಢ ಅನ್ವೇಷಣೆಯ ಫಲ ಎಂದು ನನ್ನ ಅನಿಸಿಕೆ. ಮಾನವ ಸರಿಯಾದ ಕ್ರಮದಲ್ಲಿ ಕ್ರಿಯಾಶೀಲನಾಗಲು ತಡೆಯೊಡ್ಡುವ, ಆತನ ಅಂತರ್ಯದಲ್ಲಿ ಕಂತಿರುವ ವ್ಯಾಪಕವಾದ ದುಃಖ, ತೊಳಲಾಟಗಳಿಗೆ ಅಶಿಸ್ತು ಕಾರಣ. ಇದರ ಬೇರುಗಳು ನಿಜಕ್ಕೂ ನಮ್ಮ ಯೋಚನಾ ಪ್ರಕ್ರಿಯೆಯ ಸಾಮಾನ್ಯ ಸ್ವಭಾವದ ಬಗ್ಗೆ ನಮಗಿರುವ ಅಜ್ಞಾನದಲ್ಲಿ ನೆಟ್ಟಿದೆ, ಎಂದು ಜೆ.ಕೆ. ಗಂಭೀರವಾಗಿ ವಿಶ್ಲೇಷಿಸುತ್ತಾರೆ. ಇನ್ನೂ ಸ್ಪಷ್ಟಪಡಿಸುವುದಾದರೆ, ಆಲೋಚನೆಯಲ್ಲಿ ಮುಳುಗಿರುವಾಗ, ನಿಜಕ್ಕೂ ಅಲ್ಲಿ ಏನು ನಡೆಯುತ್ತಿರುತ್ತದೆ

ಎಂಬುದನ್ನು ನಾವು ನೋಡುವುದೇ ಇಲ್ಲ. ಆಲೋಚನಾ ಪ್ರಕ್ರಿಯೆಯ ಎಲ್ಲ ಮುಖಗಳನ್ನು ಲಕ್ಷ್ಯವಿಟ್ಟು ಗಮನಿಸಿದರೆ ಮಾತ್ರ, ನಾವು ಆಲೋಚನೆಯೆಂಬುದು ಕೇವಲ ಮನುಷ್ಯನ ಮೆದುಳು ಮತ್ತು ಸಮಸ್ತ ನರಮಂಡಲದ ಆಂತರ್ಯದಲ್ಲಿ ನಡೆಯುವ ನಿರಂತರ ವ್ಯಾಪಾರಗಳ ಭೌತಿಕ ಪ್ರಕ್ರಿಯೆ (material process) ಯಷ್ಟೇ ಆಗಿದೆ ಎಂದು ಕಂಡುಕೊಳ್ಳುತ್ತೇವೆ ಎನ್ನುತ್ತಾರೆ ಜೆ.ಕೆ." ಡಾ। ಬಾಮ್ ಮುಂದುವರಿಯುತ್ತಾ, "ಸಾಮಾನ್ಯವಾಗಿ ನಾವು ನಮ್ಮ ಯೋಚನಾ ವಿಷಯದ ಬಗ್ಗೆ ಎಚ್ಚರದಲ್ಲಿರುತ್ತೇವೆಯೇ ವಿನಾ ಯೋಚನೆಗಳು ವಾಸ್ತವವಾಗಿ ಹೇಗೆ ಉತ್ಪತ್ತಿಯಾಗುತ್ತವೆ ಎಂಬುದನ್ನು ಸರಿಯಾಗಿ ಗಮನಿಸುವುದಿಲ್ಲ... ಆದರೆ ಯೋಚನಾ ವಿಷಯಗಳ ಒಟ್ಟಿಗೇ ಯೋಚನಾ ಪ್ರಕಿಯೆಯ ಸಂರಚನೆ, ವಿನ್ಯಾಸ ಹಾಗು ಸ್ವಾಭಾವಿಕ ಕ್ರಿಯಾ ಸ್ವರೂಪವನ್ನೂ ಗಮನಿಸುವ ಅಗತ್ಯವಿದೆ.... ಇದು ಸಾಧ್ಯವೇ? ಧ್ಯಾನದಲ್ಲಿ ಸಾಧ್ಯ ಎನ್ನುತ್ತಾರೆ ಜೆ. ಕೃಷ್ಣಮೂರ್ತಿ. ಆದರೆ ಇಂದು ಸಾಮಾನ್ಯವಾಗಿ ಚಾಲ್ತಿಯಲ್ಲಿರುವ ಪರಸ್ಪರ ವಿರೋಧಾಭಾಸಗಳಿಂದ ಕೂಡಿದ ಧ್ಯಾನ ಪದ್ಧತಿಯಲ್ಲಲ್ಲ. ಧ್ಯಾನ ಎಂಬ ಪದವನ್ನು ಜೆ.ಕೆ. ಇಂದು ನಾನಾ ತರದಲ್ಲಿ ಪ್ರಚಲಿತವಿರುವ ಜಾಳುಜಾಳಾದ ಅರ್ಥಗಳಲ್ಲಿ ಬಳಸುವುದಿಲ್ಲ. ಖಚಿತ ಹಾಗೂ ಸ್ಪಷ್ಟ ಅರ್ಥದಲ್ಲಿ ಬಳಸುತ್ತಾರೆ. ವಿಚಾರ ಮತ್ತು ಯೋಚನಾಕ್ರಿಯೆಯ ಜೊತೆ ಬೆರೆತು ಜೀವತಳೆಯುವ ಅಶಿಸ್ತಿನ ಮೂಲವಾದ ಮೆದುಳಿನ ಸಕಲ ವ್ಯಾಪಾರಗಳನ್ನೂ ಗಮನಿಸುವುದರಿಂದ ಆರಂಭವಾಗುತ್ತದೆ ಧ್ಯಾನ. ಇಂಥ ಧ್ಯಾನ. ಇಂಥ ಧ್ಯಾನ ಪ್ರಕ್ರಿಯೆಯು, ಮನಸ್ಸಿನಲ್ಲಿ ಏನೆಲ್ಲ ಜರಗುತ್ತಿದೆಯೆಂಬುದನ್ನು ಆಗ್ರಹ ಆಯ್ಕೆ ವಿಮರ್ಶೆಗಳಿಲ್ಲದೆ, ಸ್ವೀಕಾರ, ನಿರಾಕರಣೆಗಳಿಲ್ಲದೆ ಗಮನಿಸುತ್ತಿರುತ್ತದೆ. ಈ ಎಲ್ಲಾ ಕ್ರಿಯೆಗಳೂ, ಚಟುವಟಿಕೆಗಳೂ ಮತ್ತು ಅವುಗಳನ್ನು ತಿಳಿದುಕೊಳ್ಳುವುದರ ಅರ್ಥವೇನು ಎಂಬುದನ್ನು ಗ್ರಹಿಸುವ ಕ್ರಿಯೆಯೂ, ಒಟ್ಟೊಟ್ಟಿಗೇ ಜರಗುತ್ತಿರುತ್ತವೆ" ಎಂದು ವಿವರಿಸುತ್ತಾರೆ.

"ಈ ಧ್ಯಾನ ಪ್ರಕ್ರಿಯೆಯಲ್ಲಿ ಯಾವುದೇ ಸಂಕಲ್ಪ, ಆಯ್ಕೆ, ನಿರ್ಧಾರ ಅಥವಾ ಆಲೋಚಿಸುವವನ ಇತರ ಪ್ರವೃತ್ತಿಗಳು ಮಧ್ಯೆ ಪ್ರವೇಶಿಸುವುದಿಲ್ಲ. ಹಾಗಾಗಿ ಇದು ತಾನಾಗಿಯೇ ಆಲೋಚನೆಯ ಎಲ್ಲಾ ಚಟುವಟಿಕೆಗಳನ್ನು ಉನ್ನತ ಶಿಸ್ತಿಗೆ ಒಳಪಡಿಸುತ್ತದೆ. ಶಿಸ್ತು ಪ್ರಕಟಗೊಂಡಂತೆಯೇ ನಮ್ಮ ಪ್ರಜ್ಞೆಯ ಹಿನ್ನಲೆಯಲ್ಲಿ ಸಾಮಾನ್ಯವಾಗಿ ನೆಲೆಯಾಗಿರುವ ಎಲ್ಲಾ ಸದ್ದು, ಅವ್ಯವಸ್ಥೆಗಳು ಕೊನೆಗೊಂಡು, ಮನಸ್ಸು ನಿಶ್ಯಬ್ದತೆಯಲ್ಲಿ ತಂಗುತ್ತದೆ. ಇಂಥ ಸ್ಥಿತಿಯಲ್ಲಿ, ಯೋಚನೆಗಳು ಅನಿವಾರ್ಯವಾದ ನಿಜ ಉದ್ದೇಶಗಳಿಗಾಗಿ ಮಾತ್ರ ಉದ್ಭವಿಸಿ, ಅಲ್ಲಲ್ಲೇ ಕೊನೆಗೊಳ್ಳುತ್ತವೆ. ವಾಸ್ತವ ಬದುಕಿಗೆ ಅತ್ಯಂತ ಮುಖ್ಯವಾದುದು ಮಾತ್ರ ಜರಗುತ್ತಿರುತ್ತದೆ. ಮನಸ್ಸು ಮೌನದಲ್ಲಿ ನೆಲೆಗೊಂಡಿರುತ್ತದೆ. ಇಂಥ ಹೆಪ್ಪುಗಟ್ಟುವ ಮೌನದಲ್ಲಿ ಹೊಸ ಹೊಸ ಸೃಜನಶೀಲ ಸಂಗತಿಗಳು ನಿರಂತರವಾಗಿ ಸಂಭವಿಸುತ್ತವೆ. ಈ ಸೃಷ್ಟಿಯನ್ನು ಶಬ್ದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಹಾಗಾಗಿ ಜೆ.ಕೆ. ಶಬ್ದಗಳಲ್ಲಿ ವಿವರಿಸದೆ ಆಲೋಚನೆಯ ಸ್ವಭಾವಗಳನ್ನು ಸ್ವತಃ ಗಮನಿಸುವ ಮೂಲಕ ಧ್ಯಾನ ಪ್ರಕ್ರಿಯೆಯನ್ನು ನೇರವಾಗಿ ನಾವು ಕಂಡುಕೊಳ್ಳಲು ಸೂಚಿಸುತ್ತಾರೆ; ಮತ್ತು ಈ ಅರ್ಥದಲ್ಲಿ ಧ್ಯಾನ, ಮಾನಸಿಕ ಚಟುವಟಿಕೆಯಲ್ಲಿ ಶಿಸ್ತು ತರುತ್ತದೆ ಎನ್ನುತ್ತಾರೆ. ಯುಗಯುಗಗಳಿಂದ ಮಾನವ ಜನಾಂಗದ ಜೊತೆಯೇ ಸಾಗಿ ಬಂದು ಇಂದು ಮುಂದುವರಿಯುತ್ತಿರುವ ಮತ್ತು ಭವಿಷ್ಯದಲ್ಲೂ ಪರಿವರ್ತನೆಯ ಸಾಧ್ಯತೆ ಕಾಣದಿರುವ ಆತನ ದುಃಖ–ಬವಣೆಗಳು, ಅವ್ಯವಸ್ಥೆ, ಗೊಂದಲಗಳು ಈ ಶಿಸ್ತಿನಿಂದ ಕೊನೆಗೊಳ್ಳುತ್ತವೆ ಎಂದು ಜೆ.ಕೆ. ನುಡಿಯುತ್ತಾರೆ" ಎಂದು ಡೇವಿಡ್ ಬಾಮ್ ಜೆ.ಕೆ. ಯವರ ಚಿಂತನೆಯ ಸತ್ವವನ್ನು ಸೂತ್ರೀಕರಿಸುತ್ತಾರೆ.

ಮುಂದೆ ಬಾಮ್, ಈ ಚಿಂತನ ಸೂತ್ರದ ಮಹತ್ವವನ್ನು ಒಬ್ಬ ವಿಜ್ಞಾನಿಯಾಗಿ ವಿಶ್ಲೇಷಿಸುತ್ತಾ "ಕೃಷ್ಣಮೂರ್ತಿಯವರ ತತ್ವಜ್ಞಾನವನ್ನು ಅದರ ಅತ್ಯುನ್ನತ ಹಾಗೂ ಪರಿಶುದ್ಧ ಸ್ಥಿತಿಯಲ್ಲಿ ಸ್ವೀಕರಿಸಿದರೆ, ಅದರೊಳಗೆ ವೈಜ್ಞಾನಿಕ ವಿಧಾನದ ಸತ್ವವು ಸರ್ವವ್ಯಾಪಿಯಾಗಿರುವುದು ಸ್ಪಷ್ಟವಾಗುತ್ತದೆ. ಅವರು ನಮ್ಮ ಆಲೋಚನಾ ಪ್ರಕ್ರಿಯೆಯ ಸಹಜ ಸ್ವಭಾವದ ವಾಸ್ತವದಿಂದ (fact) ಆರಂಭಿಸುತ್ತಾರೆ. ನಮ್ಮ ಪ್ರಜ್ಞೆಯ ಪ್ರಕ್ರಿಯೆಯನ್ನು ಎಚ್ಚರದಿಂದ ಆಲಿಸುವುದನ್ನೊಳಗೊಂಡು, ನಮ್ಮ ಆಲೋಚನಾ ಪ್ರಕ್ರಿಯೆಯ ಸಹಜ ಪ್ರಭಾವವನ್ನು ತತ್ಪರತೆಯಿಂದ ಅವಾಲೋಕಿಸುತ್ತಾ ಸರಿಯಾಗಿ ಗಮನಿಸುವ ಮೂಲಕ ವಾಸ್ತವ ಸಾಬೀತುಗೊಳ್ಳುತ್ತದೆ. ಇಲ್ಲಿ ಒಬ್ಬ ಸತತವಾಗಿ ಕಲಿಯುತ್ತಿರುತ್ತಾನೆ; ಮತ್ತು ಈ ಕಲಿಕೆಯಲ್ಲೇ ವೈಚಾರಿಕ ಪ್ರಕ್ರಿಯೆಯ ಸಮಗ್ರ ಸ್ವಭಾವದ ಬಗ್ಗೆ ಒಳನೋಟಗಳನ್ನು ಪಡೆಯುತ್ತಾನೆ. ಆದರೆ, ಈ ಒಳನೋಟವೂ ಪರೀಕ್ಷೆಗೊಳಪಡುತ್ತದೆ. ವೈಚಾರಿಕ ಶಿಸ್ತಿನೊಟ್ಟಿಗೆ ಈ ಒಳನೋಟ ಸೇರಿಕೊಂಡಿರಬಲ್ಲುದೇ? ಎಂಬುದು ಮೊದಲನೆಯ ಪರೀಕ್ಷೆಯಾದರೆ ಈ ಒಳನೋಟ ಇದರಿಂದಲೇ ಪ್ರಕಟಗೊಳ್ಳುವ ಒಟ್ಟು ಬದುಕಿನಲ್ಲಿ ಶಿಸ್ತು ಮತ್ತು ಸುಸಂಗತೆಗೆ ಕಾರಣವಾಗಬಲ್ಲುದೆ? ಎಂಬುದು ಎರಡನೆಯದು.

'ಯಾವ ರೀತಿಯಲ್ಲೂ ನಾನು ಅಧಿಕಾರವಾಣಿಯಲ್ಲಿ ಬೋಧಿಸುವ ಗುರುವಲ್ಲ' ಎಂದು ಕೃಷ್ಣಮೂರ್ತಿ ಯಾವಾಗಲೂ ಗಟ್ಟಿಯಾಗಿ ಹೇಳುತ್ತಾರೆ. ಅವರು ತಮ್ಮ ಸತತ ಅನ್ವೇಷಣೆಯಲ್ಲಿ ಕೆಲವೊಂದು ಸಂಗತಿಗಳನ್ನು ಕಂಡುಕೊಂಡಿದ್ದಾರೆ. ಸೂಕ್ಷ್ಮವಾಗಿ ಆಲಿಸಬಲ್ಲವರಿಗೆ ತನ್ನ ಅನ್ವೇಷಣೆಯ ಸತ್ವ ಎಟಕುವಂತೆ ಬಹಳ ಮುತುವರ್ಜಿ ವಹಿಸುತ್ತಾರೆ. ಅವರ ತತ್ತ್ವವು ಯಾವುದೇ ಸಿದ್ಧಾಂತದ ಮೇಲೆ ನಿಂತಿಲ್ಲ. ನಿಶ್ಯಬ್ದ ಮನಃಸ್ಥಿತಿಗೆ ತಲುಪಲು ಯಾವುದೇ ವಿಧಿ–ವಿಧಾನ, ನಿಶ್ಚಿತ ತಂತ್ರಗಾರಿಕೆ, ಧಾರ್ಮಿಕ ನಂಬಿಕೆ, ಆಚರಣೆಗಳ ಹೊಸ ಪದ್ಧತಿ ಮುಂತಾದ ಯಾವುದನ್ನೂ ನೀಡುವ ಉದ್ದೇಶ ಕೃಷ್ಣಮೂರ್ತಿಯವರಿಗಿಲ್ಲ. ಅವರೇ ಹೇಳುವ, ಲಕ್ಷ್ಯವಿಟ್ಟು ಗಮನಿಸುವಿಕೆಯನ್ನು ಒಬ್ಬಾತ ಸ್ವತಃ ಕಂಡುಕೊಳ್ಳಬಹುದೇ? ಮತ್ತು ಅಲ್ಲಿಂದಲೂ ಮುಂದುವರಿದು ತಾನು ಇನ್ನೂ ಹೊಸ ಹೊಸ ಆವಿಷ್ಕಾರಗಳನ್ನು ಈ ಪಥದಲ್ಲಿ ಮಾಡಬಹುದೇ? ಎಂದು ನೋಡುವುದು ಆಯಾ ವ್ಯಕ್ತಿಗೆ ಸಂಬಂಧಪಟ್ಟದ್ದು...... ಆದರೆ ಕೃಷ್ಣಮೂರ್ತಿ ನಿಜಕ್ಕೂ ಹೇಳುವುದು ಏನನ್ನು ಎಂದು ಸಂಪೂರ್ಣ ತಿಳಿದುಕೊಳ್ಳಬೇಕಾದರೆ, ನಮ್ಮೆಲ್ಲ ಪ್ರತಿಸ್ಪಂದನಗಳನ್ನೂ ಒಳಗೊಂಡು ಅವರೇ ಹೇಳುವ ರೀತಿಯ ಗಾಢ ಅವಲೋಕನದ ಅಗತ್ಯವಿದೆ" ಎಂದು ಡೇವಿಡ್ ಬಾಮ್ ಹೇಳುತ್ತಾರೆ.

---

* ಕೃಷ್ಣಮೂರ್ತಿ ಮತ್ತು ಪ್ರೊ। ಡೇವಿಡ್ ಬಾಮ್ ನಡುವೆ ನಡೆದ ನೂರಾರು ಸಂವಾದಗಳ ಪರಿಣಾಮವಾಗಿ ಈ ಕೆಳಗಿನ ಪುಸ್ತಕಗಳು ಪ್ರಕಟಗೊಂಡವು:

1. Ending of Time
2. Truth and Actuality
3. Future of Humanity
4. Limits of Thought

❐

### ಮಾನವನಿರ್ಮಿತ ಎರಡೂ ಕ್ಷೇತ್ರಗಳನ್ನು ಮೀರಿ

# ಅತ್ಯಂತ ಪವಿತ್ರವಾದ್ದು

(ಮುಂದುವರೆದಿದೆ...)

**ಪ್ರ:** ನೀವು ನಿಜವಾಗಲೂ ಆ ಎರಡಕ್ಕೂ ಸೇರಿಲ್ಲವಾದರೆ, ಬಹುಶ: ಅದಿರಬಹುದು.

**ಕೆ:** ಇರಬಹುದು ಅಥವಾ ಇರದಿರಬಹುದು ಅಲ್ಲ. ನಿಮಗಿದೆಯೇ?

ನೋಡಿ ಸ್ವಾಮಿ. ಎಂಟು ವರ್ಷದವರೆಗೆ ನಾನೊಬ್ಬ ಹಿಂದು ಬಾಲಕನಾಗಿದ್ದೆ. ಸಂಪ್ರದಾಯ, ಧ್ಯಾನ ಮಾಡುತ್ತಾ, ದೇವಸ್ಥಾನಕ್ಕೆ ಹೋಗುತ್ತಾ, ತುಂಬಾ ಸರಳವಾಗಿ ಜೀವಿಸಿದ್ದ ಅಸಾಮಾನ್ಯ ಸಂಪ್ರದಾಯನಿಷ್ಠ ತಂದೆ, ತಾಯಿ. ಆಮೇಲೆ ನನ್ನನ್ನು ಮತ್ತು ನನ್ನ ಸಹೋದರನನ್ನು ಯಾರೋ ಸ್ವೀಕರಿಸಿದರು. ಅವರು, ಒಬ್ಬ ದೊಡ್ಡವರಿದ್ದಾರೆ, ಅವರು ಈ ಹುಡುಗ ಏನೋ ಆಗಲಿದ್ದಾನೆ ಎಂದು ನಮಗೆ ಹೇಳಿದ್ದಾರೆ, ಇನ್ನೂ ಏನೇನೋ ಹೇಳಿದರು. ಅವನ ಕಾಳಜಿ ವಹಿಸಲಾಯಿತು, ನೋಡಿಕೊಳ್ಳಲಾಯಿತು, ಗಮನಿಸಲಾಯಿತು, ಜನಗಳು ಅವನನ್ನು ಭ್ರಷ್ಟಗೊಳಿಸಬಹುದೆಂದು ಅವನ ಪಾಡಿಗೆ ಅವನಿರಲು ಬಿಡಲಿಲ್ಲ. ಅವನನ್ನು ಬಹಳ ಕಾಳಜಿಯಿಂದ ನೋಡಿಕೊಳ್ಳಲಾಯಿತು. ಆಮೇಲೆ, ಅವೆಲ್ಲವೂ ಕಾಣೆಯಾಯಿತು. ಮತ್ತವರು ಇವನು ಜಗದ್ಗುರುವಾಗಲಿದ್ದಾನೆ' ಎಂದು ಹೇಳಿದರು. ಮತ್ತು ನಾನಾಗ ಇವೆಲ್ಲಾ ಏನೂ ಅರಿಯದ, ಕೇವಲ ಹದಿನಾಲ್ಕು, ಹದಿಮೂರರ ಬಾಲಕನಾಗಿದ್ದೆ. ಅದು ಒಂದು ಕಿವಿಯ ಒಳಹೊಕ್ಕು ಇನ್ನೊಂದರಿಂದ ಹೊರಹೋಗುತ್ತಿತ್ತು. ಒಬ್ಬ ಹಿಂದುವಾಗಿ, ಒಬ್ಬ ಥಿಯಾಸಫಿಸ್ಟ್ ಆಗಿ ಅನುಬಂಧಿತನಾಗಲಿಲ್ಲ. ಆದರೆ, ಆ ಕಾಲಾತೀತನಾದ ಗುರುವು ನಿನ್ನ ಮೂಲಕ ಮಾತನಾಡುತ್ತಾನೆ' ಎಂದು ಹೇಳಿದರು. ಅವರು ಅದನ್ನು ಒಬ್ಬ ವ್ಯಕ್ತಿಯನ್ನಾಗಿ ಅನುವಾದಿಸಿದರು. ನಾನು ಯಾವುದರ ಬಗ್ಗೆ ಹೇಳುತ್ತಿದ್ದೇನೆಂದು ಅರ್ಥವಾಗುತ್ತಿದೆಯೇ? ನಿಮಗೆ ಆಗುವುದಿಲ್ಲ. ಅವರು ಅದನ್ನು ಬೇರೆಯದೇ ಮಟ್ಟದಲ್ಲಿ ತಾವು ಭೇಟಿಯಾದ, ತಮಗೆ ಸಂದೇಶ ನೀಡಿದ, ಇತ್ಯಾದಿ ವ್ಯಕ್ತಿಯನ್ನಾಗಿ ಅನುವಾದಿಸಿದರು.

ಈಗ, ಸುಮ್ಮನೆ ಇದನ್ನು ಕೇಳಿ. ಅದು ಒಬ್ಬ ವ್ಯಕ್ತಿಯಲ್ಲ. ನೀವು ಸ್ವರ್ಗದ ಬಗ್ಗೆ ಮಾತಾಡುವಾಗ, ವ್ಯಕ್ತಿ ತುಂಬಾ ಚಿಕ್ಕವನಾಗುತ್ತಾನೆ. ಒಬ್ಬರನ್ನು ಕುಬ್ಜವಾಗಿಸುವುದು – ನಿಮಗರ್ಥವಾಗುತ್ತಿದೆಯೇ? ಈಗ, ನೀವು ಅದರಲ್ಲಿ ಬೆಳೆಸಲ್ಪಟ್ಟಿದ್ದರೆ, ಒಂದೋ ನೀವು ಅನುಬಂಧಿತರಾಗಬಹುದು ಅಥವಾ ನಾಶವಾಗಬಹುದು. ನಾನೇನು ಹೇಳುತ್ತಿದ್ದೇನೆಂದು ಅರ್ಥವಾಗುತ್ತಿದೆಯೇ? ಅದೆಲ್ಲಾ ನಿಮಗೆ ದಿಕ್ಕಿಲ್ಲದ ಹೊಸ ವಿಷಯವಷ್ಟೇ. ನಾನು ಯಾವುದರ ಬಗ್ಗೆ ಹೇಳುತ್ತಿದ್ದೇನೆಂದು ಅರ್ಥವಾಗುತ್ತಿದೆಯೇ?

**ಪ್ರ:** ನೀವು ಅಕ್ಷರಶಃ ನಿಮ್ಮಿಂದಲೇ ದೂರ ನಡೆದುಹೋಗಬೇಕು, ಆಮೇಲೆ ಮತ್ತಿನ್ನೇನೊ ಕಾರ್ಯಪ್ರವೃತ್ತವಾಗುತ್ತದೆ ಎಂದು ಹೇಳುತ್ತಿದ್ದೀರಲ್ಲವೇ?

**ಕೆ:** ಅದನ್ನು ಹಾಗೆ ಹೇಳಬೇಡಿ. ನೀವು ನಿಮ್ಮಿಂದಲೇ ದೂರ ನಡೆದುಬಿಡುವುದಿಲ್ಲ. ನೀವು ಎಂಬುದಿಲ್ಲ: ನೀವು ನಡೆದುಹೋಗುತ್ತೀರಿ.

**ಪ್ರ:** ನಾನು ಅಹಂಕಾರ ಎಂಬರ್ಥದಲ್ಲಿ ಹೇಳಿದೆ.

**ಕೆ:** ಇಲ್ಲ, ಹಾಗೆ ಪ್ರಸ್ತಾವಿಸಬೇಡಿ. ಅದನ್ನೇ ಸಂಪ್ರದಾಯಸ್ಥರು ಮಾಡಿದ್ದಾರೆ: ಅವರು ತಮ್ಮಿಂದಲೇ ದೂರ ನಡೆದಿದ್ದಾರೆ ಮತ್ತು ತಮ್ಮನ್ನು ಅಗಾಧವಾದದ್ದೊಂದರೊಡನೆ ಗುರುತಿಸಿಕೊಂಡಿದ್ದಾರೆ, ಅದಿನ್ನೂ ತಮ್ಮ ಸ್ವರೂಪವೇ.

**ಪ್ರ:** ನೀವು ಹೇಳುತ್ತಿರುವುದರದ ಸ್ಪಷ್ಟತೆಯನ್ನು ನಾವೇಕೆ ನೋಡುವುದಿಲ್ಲ?

**ಕೆ:** ನನಗೆ ಗೊತ್ತಿಲ್ಲ.

**ಪ್ರ:** ಹಾಗಾದರೆ ನೀವೇಕೆ ನಮ್ಮನ್ನು ಕುರಿತು ಮಾತಾಡುತ್ತಿದ್ದೀರಿ? ನಾನೇಕೆ ಇಲ್ಲಿ ಕೇಳಿಸಿಕೊಳ್ಳುತ್ತಿದ್ದೇನೆ. ಇವೆಲ್ಲಾ ನನಗೆ ಅಸಂಬದ್ಧ ಎನಿಸುತ್ತಿದೆ. ನನಗಿದು ಅರ್ಥವಾಗುತ್ತಿಲ್ಲ.

> "ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು,
> ಪರಿಹಾರದ ಬಯಕೆಯಿಂದ ಸ್ವಾತಂತ್ರ್ಯ ಅವಶ್ಯಕ."
>
> – ಜೆ. ಕೃಷ್ಣಮೂರ್ತಿ

**ಕೆ:** ನೋಡಿ ಸ್ವಾಮಿ, ನನಗೆ ನನ್ನ ಮಗ ಜೀವನದ ಜಲರಾಶಿ ಪಡೆಯುವುದು ಬೇಕು, ಮಾನವ–ನಿರ್ಮಿತ ಹೊಳೆ ಮತ್ತು ಮಾನವ–ನಿರ್ಮಿತ ಜಲಾಶಯಗಳಲ್ಲ, ಆದರೆ ಕೊನೆ-ಮೊದಲಿಲ್ಲದ, ಅಳತೆಮಾಡಲಾಗದ ಆಳವಿರುವ ಜಲರಾಶಿ. ಅವನದನ್ನು ಹೊಂದುವುದು ನನಗೆ ಬೇಕು, ಮತ್ತದು ನಿಮ್ಮ ಜವಾಬ್ದಾರಿ. ನಾನು ಈ ಎರಡು ಸಾಂಪ್ರದಾಯಿಕ ಕ್ಷೇತ್ರಗಳಲ್ಲೇ ನಿರಂತರವಾಗಿ ಆಟವಾಡುತ್ತಿರಬೇಡಿ ಎಂದು ನಿಮಗೆ ಹೇಳುತ್ತೇನೆ. ಮತ್ತೆ ಅದನ್ನು ಕಂಡುಕೊಳ್ಳುವುದು ನಿಮ್ಮ ಕೆಲಸ. ಅದು ಸೃಜನಶೀಲತೆ, ಅಲ್ಲವೇ?

ತಡೆಯಿರಿ, ನಾನು ನಿಮಗೆ ತೋರಿಸುತ್ತೇನೆ. ಮೊದಲಿಗೆ, ನೀವು ಶಿಕ್ಷಣತಜ್ಞರು, ಆದ್ದರಿಂದ ನಾನು ನನ್ನ ಮಗನನ್ನು ನಿಮ್ಮ ಬಳಿ ಕಳೆಸುತ್ತೇನೆ. ಮತ್ತು, ಈ ಎರಡು ಕ್ಷೇತ್ರಗಳಲ್ಲಿ ಕೆಲಸಮಾಡಬೇಡಿ, ಏಕೆಂದರೆ ಏನನ್ನಾದರೂ ಸಾಧಿಸುವ, ಸೃಷ್ಟಿಸುವ ಮೊದಲೇ ವಯಸ್ಸಾಗಿ ಸಾಯುತ್ತೀರಿ. ಮತ್ತು, ಮಾನವರಾಗಿ ಅದನ್ನು ಈ ಹುಡುಗನಲ್ಲಿ ಸೃಷ್ಟಿಸುವುದು ನಿಮ್ಮ ಜವಾಬ್ದಾರಿ ಎಂದು ನಾನು

ನಿಮಗೆ ಹೇಳುತ್ತೇನೆ. ಅದನ್ನು ಸೃಷ್ಟಿಸಿ! ಹೇಗೆ ಎಂದು ನನ್ನನ್ನು ಕೇಳಬೇಡಿ. ಅದು ಸೃಷ್ಟಿ, ಅಲ್ಲವೇ? ನಿಮ್ಮ ಗರ್ಭದಲ್ಲಿ ಒಂದು ಮಗುವನ್ನು ಸೃಷ್ಟಿಸುವ ರೀತಿ – 'ನಾನು ಅದನ್ನು ಹೇಗೆ ಸೃಷ್ಟಿಸಲಿ?' ಎಂದು ಕೇಳುವುದಿಲ್ಲ. ನಿಮ್ಮ ಬಳಿ ಬಯಲಿದೆ, ನಿಮ್ಮ ಬಳಿ ಮನೆಯಿದೆ, ನಿಮ್ಮ ಬಳಿ ವಿದ್ಯಾರ್ಥಿಗಳಿದ್ದಾರೆ, ಅಲ್ಲಿ ನಿಮ್ಮ ಬಳಿ ಎಲ್ಲವೂ ಇದೆ, ಮತ್ತು ನಾನು ಹೇಳುತ್ತೇನೆ, ದೇವರ ಸಲುವಾಗಿ, ಈ ಎರಡು ಕ್ಷೇತ್ರಗಳಲ್ಲಿ ಕೆಲಸಮಾಡಬೇಡಿ, ಏಕೆಂದರೆ ಈ ಎರಡೂ ಕ್ಷೇತ್ರಗಳಲ್ಲಿ ನೀವೆಂದಿಗೂ ಏನೊಂದನ್ನೂ ಮಾಡುವುದಿಲ್ಲ.

ಪ್ರ: ಸೃಷ್ಟಿ ಎಂಬ ಪದ ಅದಾಗಲೇ ಇಲ್ಲದಿರುವ ಏನನ್ನಾದರೂ ಉತ್ಪಾದಿಸುವದನ್ನು ಸೂಚಿಸುತ್ತದೆ.

ಕೆ: ನಾನು ಸೃಷ್ಟಿಯನ್ನು ವರ್ಣಚಿತ್ರ ಮಾಡುವ ಭಾವದಲ್ಲಿ ಅರ್ಥೈಸಿಲ್ಲ; ಅದು ಸೃಷ್ಟಿಯಲ್ಲ.

ಪ್ರ: ಬಹುಶ: ಅದು ಅವನಿಗೆ ಕಾಣಿಸಲ್ಪಡಬೇಕು, ಆದರೆ ಅದು ಅವನಿಗೆ ಏನನ್ನೂ ಕೊಡುವುದಿಲ್ಲ.

ಕೆ: ಇಲ್ಲ, ಅವನಿಗೆ ಏನಾದರೂ ಕೊಡಿ ಎಂದು ಹೇಳುತ್ತಿಲ್ಲ. ಅವನು ನಿಮ್ಮಲ್ಲಿಗೆ ಅನುಬಂಧಿತನಾಗಿ ಬರುತ್ತಾನೆ. ಅವನು ನಿಮ್ಮಲ್ಲಿಗೆ ವಿವಿಧ ಪ್ರವೃತ್ತಿಗಳೊಡನೆ ಬರುತ್ತಾನೆ: ಕುಡಿಯುವುದು, ಸೇದುವುದು, ಇದನ್ನು ಮಾಡಬಯಸುವುದು, ಬಯಕೆ... ಅವನು ನಿಮ್ಮಲ್ಲಿಗೆ ಹಾಗೆ ಬರುತ್ತಾನೆ. ಮತ್ತು ಆಗಲೇ ಹಾಗಿರುವ ನನ್ನ ಮಗನನ್ನು ನಿಮ್ಮಲ್ಲಿಗೆ ಕಳಿಸುತ್ತಿದ್ದೇನೆ ಎಂದು ನಾನು ಹೇಳುತ್ತೇನೆ. ಈ ಸಾಂಪ್ರದಾಯಿಕ ಕ್ಷೇತ್ರಗಳ ಮೂಲಕ ಹೋಗಬೇಡಿ, ಏಕೆಂದರೆ ಈ ಎರಡೂ ಸಾಂಪ್ರದಾಯಿಕ ಕ್ಷೇತ್ರಗಳಲ್ಲಿ ನೀವು ಎಂದಿಗೂ ಏನನ್ನೂ ಮಾಡುವುದಿಲ್ಲ – ಅಥವಾ ಆ ಒಂದು ಸಾಂಪ್ರದಾಯಿಕ ಕ್ಷೇತ್ರದಲ್ಲಿ, ಏಕೆಂದರೆ ನೀವು ಅವನನ್ನು ಕೊಲ್ಲುವುದಕ್ಕಾಗಿ ತರಬೇತಿ ನೀಡುವುದಿಲ್ಲ. ಆದ್ದರಿಂದ ನೀವು ಆ ಕ್ಷೇತ್ರದಲ್ಲಿ ಎಂದಿಗೂ ಏನನ್ನೂ ಮಾಡುವುದಿಲ್ಲ. ಆ ಕ್ಷೇತ್ರದ ಮೂಲಕ ಹೋಗಬೇಡಿ. ನಾನು ಹೇಳುತ್ತೇನೆ, ಅದನ್ನು ಬರಮಾಡಿ, ಅದು ನಿಮ್ಮ ಜವಾಬ್ದಾರಿ.

ನೀವದನ್ನು ಮಾಡಲು ಸಾಧ್ಯವೇ? ನಿಮಗೆ ಸಾಧ್ಯವೇ? ಅಲ್ಲ – ಅದೊಂದು ತಪ್ಪು ಪ್ರಶ್ನೆ. ನಿಮಗೆ ಅದರ ಅಪಾರ ಜವಾಬ್ದಾರಿ ಅನುಭವಕ್ಕೆ ಬರುತ್ತಿದೆಯೇ? ನಾವು ಮಾಡಿದರೆ, ನಾವೆಲ್ಲರೂ ಜತೆಗೂಡಿ, ನಾವದನ್ನು ಮಾಡಿದಂತೆ. ನಾವು 'ಬಿ' ಕ್ಷೇತ್ರಕ್ಕೆ ಜವಾಬ್ದಾರರಲ್ಲ, ಆದರೆ ನಾವು ಎಲ್ಲಿಯವರೆಗೆ ಈಗ ನಾನೇನು ಮಾಡಲಿ, ಇದರ ಸಂವಹನ ಹೇಗಾಗುತ್ತದೆ, ನನ್ನ ಬೆನ್ನ ಹಿಂದೆ ಸೇದುವ, ಕುಡಿಯುವ, ಏನೆಲ್ಲಾ ಮಾಡಬಯಸುವ, ಅನುಬಂಧಿತನಾದ ಈ ಮಗುವಿನೊಡನೆ ಏನು ಮಾಡಬೇಕು?' ಎನ್ನುತ್ತೇವೋ ಅಲ್ಲಿಯವರೆಗೆ ನಾವು 'ಬಿ' ಕ್ಷೇತ್ರಕ್ಕೆ ಜವಾಬ್ದಾರರಾಗಿರುತ್ತೇವೆ.

ಪ್ರ: ನೀವು ಇದರ ಬಗ್ಗೆ ಮಾತಾಡಿದ್ದೀರಿ: ನೀವು ಈ ಮೊದಲು ಪವಿತ್ರ ಎನ್ನುವ ಪದ ಉಪಯೋಗಿಸಿದ್ದೀರಿ.

ಕೆ: ಹೌದು.

ಪ್ರ: ಇಲ್ಲಿ ಇರುವ ಎಲ್ಲರೂ ತಮ್ಮನ್ನು ತಾವು ನೋಡಿಕೊಳ್ಳುವ ಕೆಲಸದಲ್ಲಿ ಬಹಳಷ್ಟು ಸಮಯ ಕಳೆದಿದ್ದಾರೆ ಎಂದು ನನಗನ್ನಿಸುತ್ತದೆ...

ಕೆ: ನನ್ನನ್ನು ನಾನು ನೋಡಿಕೊಳ್ಳುವ ಇಚ್ಛೆ ಇಲ್ಲ. ನಾನದನ್ನು ಮಾಡಿಮುಗಿಸಿದ್ದೇನೆ. ಕ್ಷಮಿಸಿ!

ಪ್ರ: ಹಾಗಾದರೆ ನಾವು ಈ ಪವಿತ್ರವಾದ್ದನ್ನು ತಲುಪುವುದು ಹೇಗೆ? ಏನು ಸಂಬಂಧ?

ಕೆ: ನಾನು ಹೇಗೆ ತೋರಿಸಲಿ? ಆ ಪರ್ವತಗಳ ಕಡೆ ನೋಡಬೇಡಿ, ಪರ್ವತಗಳಾಚೆಗೆ ನೋಡಿ. ಪರ್ವತಗಳಾಚೆ ಸತ್ಯವಾದದ್ದು ಇದೆ, ಈ ಪರ್ವತಗಳಲ್ಲ. ಮತ್ತೀಗ ನೀವು ನನ್ನ ಆತ್ಮೀಯರೇ, 'ನಾನು ಸಮೀಪ–ದೃಷ್ಟಿಯವನಾಗಿರುವಾಗ, ನಾನು ಕೋಪದಲ್ಲಿರುವಾಗ, ನಾನು ಅಸೂಯೆಯಲ್ಲಿರುವಾಗ, ನಾನು ಹೀಗಿರುವಾಗ, ನಾನು ಪರ್ವತಗಳಾಚೆ ಹೇಗೆ ನೋಡಲಿ; ಆಚೆಯದನ್ನು ಹೇಗೆ ನೋಡಲಿ?' ಎಂದು ಕೇಳುತ್ತೀರಿ. ಅವನು ಹೇಳುತ್ತಾನೆ, 'ದೇವರ ಸಲುವಾಗಿ, ಅಲ್ಲಿಂದ ಪ್ರಾರಂಭಿಸಬೇಡಿ, ಆ ಮತ್ತೊಂದು ಕಡೆಯಿಂದ ಪ್ರಾರಂಭಿಸಿ.' ಮತ್ತಾಗ ನೀವು ಹೇಳುತ್ತೀರಿ, 'ಮತ್ತೊಂದು ಕಡೆಯೆಂದರೆ ಏನೆಂದು ಹೇಳುತ್ತಿದ್ದೀರಿ? ಆ ಮತ್ತೊಂದು ಕಡೆ ನನಗೆ ಗೊತ್ತಿಲ್ಲ. ಅಲ್ಲಿಂದ ಹೇಗೆ ಪ್ರಾರಂಭಿಸಬೇಕೆಂದು ನನಗೆ ಗೊತ್ತಿಲ್ಲ.' ಆಗ ನೀವು ಮತ್ತದೇ ತತ್ವಕ್ಕೆ ಹಿಂದೆ ಬಂದಿದ್ದೀರಿ.

"ನಾವು ಏನೋ ಒಂದು ಆಗಬೇಕೆಂದು ಬಯಸಿದ ಕ್ಷಣದಿಂದ ನಾವು ಸ್ವತಂತ್ರರಾಗಿರುವುದಿಲ್ಲ."

– ಜೆ. ಕೃಷ್ಣಮೂರ್ತಿ

ನೋಡಿ ಸ್ವಾಮಿ, ನಾನು ಒಂದು ವಿಸ್ತಾರವಾದ ನದಿಯ ಈ ದಂಡೆಯಲ್ಲಿದ್ದೇನೆ, ಮತ್ತು ನಾವಿಲ್ಲಿ ಮನೆಗಳನ್ನು, ಸುಂದರವಾದ ಶಾಲೆಗಳನ್ನು ಕಟ್ಟಿದ್ದೇವೆ, ಒಳ್ಳೆಯ ಮಕ್ಕಳಿದ್ದಾರೆ – ಮತ್ತು ಹಾಳಾದ ಸೈನ್ಯದ ಜನ ಕೂಡ. ನಾವು ಈ ದಂಡೆಯಲ್ಲಿ ಮನುಷ್ಯ ಮಾಡಿರುವ ಎಲ್ಲವನ್ನೂ ಮಾಡಿದ್ದೇವೆ, ಮತ್ತಿನ್ನೂ ಇದೇ ದಂಡೆಯಲ್ಲಿ ಆಡುತ್ತಿದ್ದೇವೆ. ಮತ್ತಾಗ ಯಾರೋ ಬರುತ್ತಾರೆ ಮತ್ತು ಹೇಳುತ್ತಾರೆ: 'ದೇವರ ಸಲುವಾಗಿ, ಸ್ನೇಹಿತರೇ, ಇದ್ದನ್ನು ಮಾಡಬೇಡಿ ಏಕೆಂದರೆ ನೀವೆಂದಿಗೂ ಈ ದಂಡೆಯಿಂದ ಎದ್ದು ಹೊರಡುವುದಿಲ್ಲ. ಆ ಮತ್ತೊಂದು ದಂಡೆಗೆ ಹೋಗಿ. ಆ ಮತ್ತೊಂದು ದಂಡೆಗೆ ಹೋದರೆ, ನಿಮಗಾಗಿ ಎಲ್ಲವೂ ಸುಲಲಿತವಾಗಿ ನೆಲೆಗೊಳ್ಳುತ್ತದೆ.' ಮತ್ತಾಗ ನೀವು ಹೇಳುತ್ತೀರಿ, 'ಈಗ ನೀರಿದೆ ಎಂದು ನನಗೆ ಗೊತ್ತು; ನಾನು ದೋಣಿಯಲ್ಲಿ ಹೋಗಲೇ, ಈಜಲೇ, ನಾನೇನು ಮಾಡಬೇಕು?'. ಮತ್ತವನು ಹೇಳುತ್ತಾನೆ, ಹಾಗೆ ಸುಮ್ಮನೆ ಮತ್ತೊಂದು ದಂಡೆಗೆ ಹೋಗಿ', ಮತ್ತು ನಿಮ್ಮನ್ನು ಬಿಟ್ಟು ಹೋಗುತ್ತಾನೆ. ನೀವೇನು ಮಾಡುತ್ತೀರಿ? ನೀವೇನು

ಮಾಡುತ್ತೀರಿ? ಮಾಡುವುದೇ ಸೃಜನಶೀಲತೆ, ನಾನೇನು ಮಾಡಲಿ? ಎನ್ನುವುದಲ್ಲ. ಅದನ್ನು ನಾನು ಇನ್ನೂ ಸ್ಪಷ್ಟವಾಗಿ ಹೇಳಲಾರೆ.

ನೀವೊಬ್ಬ ಭೌತವಿಜ್ಞಾನಿ. ನಾನು ಹೇಳುತ್ತೇನೆ, 'ಸೂಕ್ಷ್ಮದರ್ಶಕದ ಮೂಲಕ ನೋಡಿ', ಮತ್ತು ನೀವು ಸೂಕ್ಷ್ಮದರ್ಶಕದ ಮೂಲಕ ನೋಡುತ್ತೀರಿ ಮತ್ತು ಬಹಳಷ್ಟು ವಿಷಯಗಳನ್ನು ನೋಡುತ್ತೀರಿ, ಆದರೆ ಇನ್ಯಾರೋ ಒಬ್ಬ ಬರುತ್ತಾನೆ, ಮತ್ತು ಹೇಳುತ್ತಾನೆ, 'ಸೂಕ್ಷ್ಮದರ್ಶಕದ ಮೂಲಕ ನೋಡಬೇಡಿ, ಅದು ಬಹಳ ನಿಯಮಿತ ಪ್ರದೇಶ, ನಿಮ್ಮ ಕಣ್ಣುಗಳನ್ನು ಅದರಿಂದ ಹೊರತೆಗೆಯಿರಿ ಮತ್ತು ನೋಡಿ.' ಅಷ್ಟೇ. ಅವನು ನಿಮ್ಮನ್ನು ಅಲ್ಲೇ ಬಿಡುತ್ತಾನೆ. ಮತ್ತು ನೀವು ಹೇಳುತ್ತೀರಿ, 'ಸರಿ, ನಾನು ಸೂಕ್ಷ್ಮದರ್ಶಕದ ಮೂಲಕ ನೋಡಿದ್ದೇನೆ, ಮುಗಿಯಿತು. ಈಗ ನಾನು ನೋಡಲು ಆರಂಭಿಸುತ್ತೇನೆ ಏಕೆಂದರೆ ನಾನು ನಿಜವಾಗಲೂ ಆಸಕ್ತನಾಗಿದ್ದೇನೆ, ನೋಡಲು ಕುದಿಯುತ್ತಿದ್ದೇನೆ; ಹೇಗೆ ನೋಡುವುದು, ಅಥವಾ ನಾನೇನು ಮಾಡಬೇಕು, ಅಥವಾ ನಾನೇನು ಹೇಳಬೇಕು, ಅಥವಾ ನೋಡುವುದರ ಸಲಕರಣೆಗಳೇನು, ಅಥವಾ ನನ್ನ ಕಣ್ಣುಗಳು ಸರಿಯಾಗಿವೆಯೇ ಎಂದು ಕೇಳುತ್ತಾ ಅಲ್ಲ. ನಾನು ನೋಡುವುದಕ್ಕಾಗಿ ದಹಿಸಲು ಸಿದ್ಧ.'

ನಾನು ನನ್ನ ಮಗನನ್ನು ನಿಮ್ಮ ಸುಪರ್ದಿನಲ್ಲಿ ಬಿಡುತ್ತೇನೆ, ಮತ್ತು ನೀವು ಜವಾಬ್ದಾರರು. ನಾನು ಐದು ವರ್ಷಗಳ ನಂತರ ಬರುತ್ತೇನೆ, ನನಗಾಗ ಉತ್ತರ ಬೇಕು. ನಾನು ನನ್ನ ಮಗನನ್ನು, ನನ್ನ ಹಣವನ್ನು, ನನ್ನ ರಕ್ತವನ್ನು ಕೊಟ್ಟಿದ್ದೇನೆ, ಮತ್ತು ನೀವು ಜವಾಬ್ದಾರರು. ನನಗೆ ನಿಮ್ಮಿಂದ ಒಂದು ಉತ್ತರ ಬೇಕು, 'ಕ್ಷಮಿಸಿ, ನಾನದನ್ನು ಮಾಡಲಾಗಲಿಲ್ಲ', ಅಥವಾ 'ನನಗೆ ಮಾಡಲಾಗವುದಿಲ್ಲ', ಅಥವಾ 'ನಿಮಗೆ ಅರ್ಥವಾಗದಂತಹ ಮತ್ತೇನೋ ಆಗಿದೆ' ಎಂದು ಹೇಳುವುದಲ್ಲ. ನೀವು ಜವಾಬ್ದಾರರೆಂದು ಅನ್ನಿಸಿದರೆ, ನೀವದನ್ನು ಹೇಳುವುದಿಲ್ಲ. ನೀವು ಇನ್ನೊಬ್ಬರ ಜೀವನಕ್ಕೆ ಜವಾಬ್ದಾರರು, ಮತ್ತು ನಿಮಗೆ ನಿಮ್ಮ ಜೀವನದ ಬಗೆಗೆ ಆಲೋಚಿಸಲು ಸಮಯವಿಲ್ಲ. ಆ ಹುಡುಗನ ಜೀವನವೇ ನಿಮ್ಮ ಜೀವನ. ಆದರೆ ನೀವು ಜವಾಬ್ದಾರರೆಂದು ಅನ್ನಿಸಿದರೆ, ಆಗ ಅದು ಆಗುತ್ತದೆ.

(ಮುಗಿಯಿತು.)

1974ರ ಸಾನೆನ್ ಸಮಾವೇಶದ ನಡುವೆ, ಕೃಷ್ಣಮೂರ್ತಿಯವರು ಇಂಗ್ಲೆಂಡ್‌ನ ಹಾಂಪ್‌ಶೈರ್‌ನಲ್ಲಿ 1969ರಲ್ಲಿ ತಾವು ಸ್ಥಾಪಿಸಲು ಸಹಾಯ ಮಾಡಿದ್ದ ಬ್ರಾಕ್‌ವುಡ್ ಶಾಲೆಗೆ ಸಂಬಂಧ ಪಟ್ಟವರ ಮತ್ತು ಶಿಕ್ಷಕರು ಒಂದು ಗುಂಪನ್ನು ಭೇಟಿಯಾದರು. ಈ ಲೇಖನ, ಹತ್ತಿರದ ಗಸ್ಟಾಡ್ ಗ್ರಾಮದಲ್ಲಿ ಅವರು ನಡೆಸಿದ ಐದು ಸಂವಾದಗಳಲ್ಲಿನ ಎರಡನೇ ಸಂವಾದದ ಭಾಗವಾಗಿದೆ. ❒

## ಮರಗಳನ್ನು ಸಂರಕ್ಷಿಸಿರಿ ಮತ್ತು ಇ-ಮೇಲ್ ವಿಳಾಸ ತಿಳಿಸಿರಿ

ಕಾಗದದ ಬಳಕೆಯಿಂದ ಮರಗಳ ನಾಶವಾಗುತ್ತಿರುವುದು ತಿಳಿದ ವಿಷಯ. ಕಾರಣ ಕಾಗದದ ಬಳಕೆಯನ್ನು ಆದಷ್ಟು ಕಡಿಮೆ ಮಾಡುವ ದಿಸೆಯಲ್ಲಿ ನಮ್ಮ 'ಸಹಪಯಣ' ತ್ರೈಮಾಸಿಕ ಪತ್ರಿಕೆಯನ್ನು 'ಕಂಪ್ಯೂಟರ್' ಮುಖಾಂತರ ವಾಚಕರಿಗೆ ತಲುಪಿಸುವ ಉದ್ದೇಶವಿದೆ. ಕಾರಣ ನಮ್ಮ ಎಲ್ಲ 'ಸಹಪಯಣ' ವಾಚಕರು, ತಮ್ಮ ಇ-ಮೇಲ್ (e-mail) ವಿಳಾಸವನ್ನು ತಿಳಿಸಿದಲ್ಲಿ ಅವರಿಗೆಲ್ಲ 'ಇ-ಮೇಲ್' ಮುಖಾಂತರ ನಮ್ಮ ಸಂಚಿಕೆಯನ್ನು ಕಳಿಸಲಾಗುವುದು. ಕಾರಣ 'ಇ-ಮೇಲ್' ವಿಳಾಸ ಉಳ್ಳವರು ಕೂಡಲೇ ತಿಳಿಸಬೇಕಾಗಿ ಬಿನ್ನಹ, ಹಾಗೆಯೇ, 'ಇ-ಮೇಲ್' ವಿಳಾಸ ಇಲ್ಲದವರು ಆ ರೀತಿ ತಿಳಿಸಿದಲ್ಲಿ, ಅವರಿಗೆ ಮೊದಲಿನಂತೆ ಮುದ್ರಿತ ಪ್ರತಿಯನ್ನು ಟಪಾಲು ಮೂಲಕ ಕಳಿಸಲಾಗುವುದು.

ಈ ವಾರ್ತಾಪತ್ರದ ಸಂಚಿಕೆಗಳನ್ನು ನಿಯಮಿತವಾಗಿ ಪಡೆಯಲಿಚ್ಛಿಸುವವರು ತಮ್ಮ ಹಾಗೂ ಇತರ ಆಸಕ್ತ ಸ್ನೇಹಿತರ ವಿಳಾಸಗಳನ್ನು (ಪಿನ್ ಕೋಡ್ ಮತ್ತು ಈ-ಮೇಲ್ ಸಹಿತ) ಈ ಕೆಳಗೆ ಭರ್ತಿ ಮಾಡಿ ಕೊನೆಯ ಪುಟದಲ್ಲಿರುವ ವಿಳಾಸಕ್ಕೆ ಬರೆಯಿರಿ.

1

2

**ಕನ್ನಡ ಭಾಷಾಂತರ ಸಮಿತಿ ಸದಸ್ಯರು**

ಪ್ರೊ|| ಓ.ಎಲ್. ನಾಗಭೂಷಣ ಸ್ವಾಮಿ, ಡಾ|| ವನಮಾಲಾ ವಿಶ್ವನಾಥ್

ಡಾ|| ಎಚ್.ಎಸ್. ರಾಘವೇಂದ್ರರಾವ್

ಶ್ರೀ ಕೆ.ಜಿ. ಕುಲಕರ್ಣಿ, ಶ್ರೀಮತಿ ಸ್ವಪ್ನಾ ಸಂತೋಷ್

# Retreat Schedule 2019 - 2020


| | | |
|---|---|---|
| June | 6 - 9 | Exploring Harmony in Relationships |
| July | 11 - 14 | What does it mean to be a 'Responsible Parent'? |
| Aug | 8 - 11 | Breaking free from the "prison of the mind" |
| Sept | 5 - 8 | Education and the 'Understanding of Life' |
| Nov | 7 - 10 | Exploring Happiness & 'the enticing world of Pleasure' |
| Dec | 4 - 8 | **Retreat for the Young (18 -35 yrs) |
| | | What are you DOING with your LIFE? (4 days) |
| Jan | 16 - 19 | Significance of 'Living in the Here &Now' in the modern world |
| Feb | 6 - 9 | Silence, Stillness, & Meditation |
| March | 5 - 8 | Why do I get 'Angry' ? |
| March | 26 - 29 | Karnataka JK Adhayana Shibira: Freedom & Responsibility (proceedings in kannada & English ) |

"ಸ್ವಾತಂತ್ರ್ಯ ಪ್ರೀತಿಯ ಸಂಗಾತಿ. ಪ್ರೀತಿ ಒಂದು ಪ್ರತಿಕ್ರಿಯೆಯಲ್ಲ. ಪ್ರೀತಿಸುವುದೆಂದರೆ, ಪ್ರತಿಯಾಗಿ ಏನನ್ನೂ ಬಯಸದಿರುವುದು,
ನೀನು ಏನನ್ನೋ ಕೊಡುತ್ತಿರುವೆ ಎಂಬ ಭಾವನೆಯೇ ಇಲ್ಲದಿರುವುದು –
ಅಂತಹ ಪ್ರೀತಿ ಮಾತ್ರ ಸ್ವಾತಂತ್ರ್ಯವನ್ನು ಅರಿಯಬಹುದು."

– ಜೆ. ಕೃಷ್ಣಮೂರ್ತಿ

*ಖಾಸಗಿ ಪ್ರಸಾರಕ್ಕಾಗಿ ಮಾತ್ರ*
*(For private circulation only)*

Printed, Published and Owned by:
Director
**The Study: Bangalore Education Centre**
Krishnamurti Foundation India
Thatguni Post, Bangalore - 560 082.
Tel.: 080 - 28435243, 28435240 Extn. 114
Mob : 9482641389
Email : kfistudy@gmail.com
Website : www.kfistudy.org
Editor : Smt. Sushma Inamdar



Book Packet containing periodicals.
Price : Single copy Rs. 5/-

Book-Post